Sri Kadidal MANJAPPA.—I cannot readily say it, Sir.

ಶ್ರೀ ಎಲ್. ಸಿದ್ದಪ್ಪ.—ಪರಿಶೀಲನೆ ಮುಗಿಯಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ ?

Sri Kadidal MANJAPPA.—They have to take gaugings to see what is the quantity of water that could be impounded there. Therefore they are now taking gaugings.

ಶ್ರೀ ಎಲ್. ಸಿದ್ದಪ್ಪ.—ಇನ್ನೂ 5 ವರ್ಷ ಬೇಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯ ಜಾಗ್ರತೆ ಅದನ್ನು ಪರಿಶೀಲನೆ ಮಾಡುತ್ತೇವೆ.

Construction of a bridge Across Suvarnavathi river near Alur.

Q.—116. **Sri B. RACHIAH** (Yelandur—Scheduled Castes).—

Will the Government be pleased to state :—

(*a*) whether it is not a fact that a bridge across Suvarnavathi river near Alur in Chamarajanagar Taluk was contemplated, surveyed and estimated ;

(*b*) if the answer is in the affirmative, the estimated cost of the construction ;

(*c*) whether it is not a fact that the District Board of Mysore have included this bridge in the list of bridges to be constructed in the District ;

(*d*) whether they intend taking up this bridge and complete it out of Central aid ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Rs. 1,13,000.

(*c*) This work was provided for in the budget estimate for 1951-52.

(*d*) Alternative proposals are under consideration.

ಶ್ರೀ ಬಿ. ರಾಚಯ್ಯ.—ಸುವರ್ಣಾವತಿ ನದಿಗೆ ಸೇತುವೆ ಕಟ್ಟಲು ಅಂದಾಜು ತಯಾರಾಗಿದೆ ಎಂದು ಹೇಳಿದ್ದೀರಿ. ಯಾವಾಗ ತಯಾರು ಆಯಿತು ?

Mr. SPEAKER.—The Member need not repeat the first sentence. "ಅಂದಾಜು ಯಾವಾಗ ತಯಾರಾಗಿದೆ" ಎಂದು ಕೇಳಿದರೆ ಸಾಕು.

ಶ್ರೀ ಕಡಿದಾಳ್ ಮಂಜಪ್ಪ.—I cannot give you the date.

ಶ್ರೀ ಬಿ. ರಾಚಯ್ಯ.—1,13,000 ರೂಪಾಯಿಗಳ ಅಂದಾಜಿನ ಪೈಕಿ ಜಿಲ್ಲಾ ಬೋರ್ಡಿನವರ quota ಎಷ್ಟು, ಸರ್ಕಾರದವರ quota ಎಷ್ಟು ಎಂದು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ಸಿಕ್ಕುವುದಿಲ್ಲ.

ಶ್ರೀ ಬಿ. ರಾಚಯ್ಯ.—ಈ ಅಂದಾಜನ್ನು ಹಿಂದಿನ ಸಾಲಿನ ಬಡ್ಜೆಟ್ಟಿನಲ್ಲಿ ಸೇರಿಸಿದ್ದೀರಾ ಎಂದು ಹೇಳಿದಿರಿ. ಆದರೂ ಆ ಕೆಲಸವನ್ನು ತೆಗೆದುಕೊಳ್ಳದೆ ಇರಲು ಕಾರಣವೇನು ?

Sri Kadidal MANJAPPA.—We have assessed all the matter and we have asked the Superintending Engineer to take it up immediately.

ಶ್ರೀ ಬಿ. ರಾಚಯ್ಯ.—ಜಾಗ್ರತೆ ಪುರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕರಾರುವಾಕ್ಕಾಗಿ ಹೇಳಲಾರೆ. ಆದಷ್ಟು ಜಾಗ್ರತೆ ಪುರು ಮಾಡುತ್ತೇವೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—(*c*)ಗೆ ಉತ್ತರವಾಗಿ ಈ ಕಾಮಗಾರಿಗೆ ಹಣವನ್ನು ಒದಗಿಸಲಾಗಿದ್ದಿತು ಎಂದು ಹೇಳಿದಿರಿ. ಡಿಸ್ಟ್ರಿಕ್ಟ್ ಬೋರ್ಡಿನ ಹಣ ಇದರಲ್ಲಿ ಸೇರಿದೆಯೇ ಅಥವಾ ಗವರ್ನಮೆಂಟ್ ಬಡ್ಜೆಟ್ ಮಾತ್ರವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರ ಬಡ್ಜೆಟ್ಟಿನಲ್ಲೂ ಸೇರುತ್ತದೆ, ನಮ್ಮ ಬಡ್ಜೆಟ್ಟಿನಲ್ಲೂ ಸೇರುತ್ತದೆ.

Construction of Arakere branch of the Visvesvaraya Channel.

Q.—143. **Sri K. PUTTASWAMY** (Srirangapatna).—

Will the Government be pleased to state :—

(*a*) whether a branch canal called Arakere Branch was not included in the original estimate of the Visvesvaraya Canal which would branch off at Pehalli of Srirangapatna Taluk ;

(*b*) the reasons for dropping it out at that stage ;

(*c*) whether it has come to their notice that the above said branch would irrigate an area in which agricultural labour is in abundance and distress conditions prevail almost every year ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) On account of heavy cost when compared with other branches and inadequacy of water supply.

(*c*) Yes.

ಶ್ರೀ ಕೆ. ಪುಟ್ಟಸ್ವಾಮಿ.—ಈ ಅರಕೆರೆ ಶಾಖಾ ನಾಲೆಗೆ ಎಷ್ಟು ಖರ್ಚಾಗುತ್ತದೆ ಎಂದು ಅಂದಾಜು ಮಾಡಿದ್ದೀರಿ ?

Sri Kadidal MANJAPPA.—Two and odd lakhs of rupees.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಎಕರೆ ಭೂಮಿ ತರಿ ಆಗುತ್ತದೆಂದು ಸರ್ವೆ ಆಗಿದೆ?

Sri Kadidal MANJAPPA.—That information is not available here.

ಶ್ರೀ ಕೆ. ಪುಟ್ಟಸ್ವಾಮಿ.—ಇತರ ಶಾಖೆಗಳಿಗಿಂತ ಈ ಶಾಖೆಗೆ ಹೆಚ್ಚು ಬೆಚ್ಚ ತಗಲುತ್ತದೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಇಲಾಖಾಧಿಕಾರಿಗಳು ಕೊಟ್ಟ ಅಂಕಿ ಅಂಶಗಳ ಆಧಾರದಿಂದ ಹೇಳುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಏನು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕಾಲುವೆ ಬಳಿ ಒಂದು ಎಕರೆಗೆ 58 ರೂಪಾಯಿ ಬೀಳುತ್ತದೆಂದೂ, ಬಾಕಿ ಕಾಲುವೆಗಳ ಕಳಗೆ ಎಕರೆಗೆ 38 ರೂಪಾಯಿಗಳಿಂದ 44ರೂಪಾಯಿಗಳವರೆಗೆ ಬೀಳುತ್ತದೆಯೆಂದೂ.

ಶ್ರೀ ಕೆ ಪುಟ್ಟಸ್ವಾಮಿ.—ಒಂದು ಎಕರೆ ತರಿ ಆಗ ಬೇಕಾದರೆ 58 ರೂಪಾಯಿಗಳು ಆಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಕರೆಗೆ 58 ರೂಪಾಯಿಗಳಾಗುತ್ತವೆಂದು ಹೇಳುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಕರೆಗೆ 58 ರೂಪಾಯಿಗಳಾದರೆ, ಅದು ಬಹಳ ಕಡಮೆ ಖರ್ಚಾಯಿತು.

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚು ಅಲ್ಲ. Contribution ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—Contribution ಎಕರೆ ಒಂದಕ್ಕೆ 5- ರೂಪಾಯಿಗಳಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—I am sorry; I will let you know the information within half an hour. Complete information has not been furnished regarding this question.

Sri K. PUTTASWAMY.—Then can this question be taken up for further supplementaries in the end?

Mr. SPEAKER.—Yes, if there is time.

Functions and Powers of Public Service Commission in Mysore.

Q.—149. Sri G. SIVAPPA (Holalkere).—

Will the Government be pleased to state :—

(a) the functions and powers of the Public Service Commission in Mysore ;

(b) whether the Public Service Commission is given full freedom to work according to the spirit of the Constitution ;

(c) whether the Public Service Commission will be consulted when officers are transferred from one department to another ?

A.—**Sri Kadidal MANJAPPA** (Minister for Revenue and Public Works).—

(*a*) All those functions mentioned in Article 320 of the Constitution.

(*b*) Yes.

(*c*) The question is not clear.

ಶ್ರೀ ಜಿ. ಶಿವಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್ appoint ಮಾಡಿ ಎಷ್ಟು ದಿವಸಗಳಾದುವು?

Mr. SPEAKER.—Yesterday it has been answered.

ಶ್ರೀ ಜಿ. ಶಿವಪ್ಪ.—ಇಷ್ಟು ದಿವಸಗಳಾದುವು ಎಂದು ಯಾರೂ ಹೇಳಲಲ್ಲ.

Mr. SPEAKER.—Yesterday he gave the date as 18th May 1951.

ಶ್ರೀ ಜಿ. ಶಿವಪ್ಪ.—Constitution ನ Article 323 ರ ಪ್ರಕಾರ, ಪಬ್ಲಿಕ್ ಸರ್ವಿಸ್ ಕಮಿಷನ್ ಪ್ರತಿ ವರ್ಷವೂ annual report ಒಪ್ಪಿಸಬೇಕು. ಹಾಗೆ annual report ನ್ನು ಒಪ್ಪಿಸಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಒಪ್ಪಿಸಿಲ್ಲ.

ಶ್ರೀ ಜಿ. ಶಿವಪ್ಪ.—ಪ್ರತಿ ವರ್ಷವೂ ಅನೆಂಬ್ಲಿ ಸದಸ್ಯರಿಗೆ ಆ annual report ನ್ನು ಕೊಡುವ ಏರ್ಪಾಡನ್ನು ಇದುವರೆಗೆ ಅನುಸರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಜಿ. ಶಿವಪ್ಪ.—ಇದಕ್ಕೆ ಸಂಬಂಧಪಟ್ಟ article ನ್ನು ಸರ್ಕಾರದ ಗಮನಕ್ಕೆ ತರಲಚ್ಛಿಸುತ್ತೇನೆ. Are the recommendations made by the Mysore Public Service Commission final?

Sri Kadidal MANJAPPA—They are not final. They are only recommendations.

Sri G. SIVAPPA.—Is it an independent body from the Government?

ಶ್ರೀ ಕಡಿದಾಳ್ ಮಂಜಪ್ಪ.—ರಾಜ್ಯಾಂಗದ ವಿಧಿ ಪ್ರಕಾರ ಅವರಿಗೆ ಏನೇನು ಅಧಿಕಾರಗಳಿವೆಯೋ ಅವೆಲ್ಲಾ ಅವರಿಗೆ ಇವೆ. ಆದರೆ ಅದು independent body ಆಗುವುದಿಲ್ಲ.

ಶ್ರೀ ಜಿ. ಶಿವಪ್ಪ.—(*c*) ಗೆ ಉತ್ತರವಾಗಿ "The question is not clear" ಎಂದು ಹೇಳಿದ್ದೀರಿ. 320 (3) ವಿಧಿ ಪ್ರಕಾರ Public Service Commision should be consulted when officers are transferred from one department to another ಎಂದು mandatory provision ಇದೆ. ಅದನ್ನು ತಾವು ಅನುಸರಿಸುತ್ತಿದ್ದೀರಾ?

Sri Kadidal MANJAPPA.—Transfer from one service to another and not from one department to another.

Sri G. SIVAPPA.—Even from one service to another—ಈ ವಿಧಿಯನ್ನು ಅನುಸರಿಸುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅನುಸರಿಸುತ್ತಿದ್ದೇವೆ.